# ಉಪತಹಶೀಲ್ದಾರರ ನ್ಯಾಯಾಲಯ, ನಾಡಕಛೇರಿ, ಕಮಲಾಪುರ,
## ಹೊಸಪೇಟೆ ತಾಲೂಕು-583221.

ವಿ.ವಿಲೇ.ಸಂ.ಕಂ/ನಾ.ಕ.ಕ/ಪಹಣಿ/ತಕರಾರು/90/2015-16 ದಿನಾಂಕ: 29.09.2016.

ಉಪಸ್ಥಿತರು: ಉಪತಹಶೀಲ್ದಾರರು,
ನಾಡಕಛೇರಿ, ಕಮಲಾಪುರ.

*****

**ವಾದಿಗಳು ಶ್ರೀ/ಶ್ರೀಮತಿ:**

1]ಶ್ರೀ ವಡ್ಡರ ತಿಮ್ಮಪ್ಪ ತಂದೆ ಲೇಟ್ ಪರಸಪ್ಪ, ವಾಸ: 8ನೇ ವಾರ್ಡ್, ಕೊಂಡನಾಯಕನಹಳ್ಳಿ ಗ್ರಾಮ, ಹೊಸಪೇಟೆ ತಾಲೂಕು.

2]ಶ್ರೀ ಸಣ್ಣ ಮಾರೆಪ್ಪ ತಂದೆ ಎ.ಮಾರೆಪ್ಪ, ವಾಸ: ಬುಡುಗ ಜಂಗಮ ಕಾಲೋನಿ, ಅರವಿಂದ ನಗರ, 22ನೇ ವಾರ್ಡ್, ಹೊಸಪೇಟೆ.

**ಪ್ರತಿವಾದಿಗಳು ಶ್ರೀ/ಶ್ರೀಮತಿ:**

ಶ್ರೀ ವಿ.ಹುಲುಗಪ್ಪ ತಂದೆ ವಿ.ಪರಸಪ್ಪ, ಸಾ: 8ನೇ ವಾರ್ಡ್, ಕೊಂಡನಾಯಕನಹಳ್ಳಿ ಗ್ರಾಮ, ಹೊಸಪೇಟೆ ತಾಲೂಕು.

**ವ್ಯಾಜ್ಯದ ಜಮೀನು:**

| ತಾಲೂಕು | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|
| ಹೊಸಪೇಟೆ | ಮಲಪನಗುಡಿ | 82/3 | 01.84 |

**ಪೀಠಿಕೆ:**

ಹೊಸಪೇಟೆ ತಾಲೂಕು, ಮಲಪನಗುಡಿ ಗ್ರಾಮದ ಸ.ನಂ.82/3 ವಿಸ್ತೀರ್ಣ: 01 ಎಕರೆ 84 ಸೆಂಟ್ಸ್ ಜಮೀನನ್ನು ಹೊಸಪೇಟೆ ತಾಲೂಕಿನ ಹೊಸಪೇಟೆ ಗ್ರಾಮದ 22ನೇ ವಾರ್ಡ್, ಬುಡುಗ ಜಂಗಮ ಕಾಲೋನಿ ನಿವಾಸಿ ವಾದಿ-2 ರವರು ದಿನಾಂಕ: 20.05.2016 ರ ನೋಂದಾಯಿತ ಕ್ರಯ ಪತ್ರ ಸಂಖ್ಯೆ: 797/2016-17 ರನ್ವಯ ವಾದಿ-1 ರವರಿಂದ ಕ್ರಯಕ್ಕೆ ಪಡೆದಿದ್ದರು, ಅದರಂತೆ, ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು, ಮಲಪನಗುಡಿ ಇವರು ನಮೂನೆ-21 ರ ನೋಟೀಸನ್ನು ಗ್ರಾಮದಲ್ಲಿ ಪ್ರಚುರಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ, ಹೊಸಪೇಟೆ ತಾಲೂಕು ಹೊಸಪೇಟೆ ಗ್ರಾಮದ 8ನೇ ವಾರ್ಡ್‌ನ ಕೊಂಡನಾಯಕನಹಳ್ಳಿ ಗ್ರಾಮದವರಾದ ಪ್ರತಿವಾದಿ ಶ್ರೀ ವಿ.ಹುಲುಗಪ್ಪ ತಂದೆ ವಿ.ಪರಸಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವುದರಿಂದ, ಸದರಿ ಪ್ರಕರಣವನ್ನು ವಿವಾದಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು, ವಿಚಾರಣೆ ಮಾಡುವುದಕ್ಕಾಗಿ ಉಭಯ ಪಕ್ಷದವರಿಗೂ ನೋಟೀಸ್ ನೀಡಿ ದಿನಾಂಕ: 04.08.2016 ರಂದು ವಿಚಾರಣೆ ನಡೆಸಲಾಯಿತು.

ವಿಚಾರಣೆ ಸಮಯದಲ್ಲಿ, ಪ್ರತಿವಾದಿಯು ಸತತವಾಗಿ ಗೈರಾಗಿರುತ್ತಾರೆ. ಜೊತೆಗೆ, ತಮ್ಮ ಹಕ್ಕನ್ನು ಸಾಬೀತು ಪಡಿಸುವ ಯಾವುದೇ ದಾಖಲೆಯನ್ನು ಸಲ್ಲಿಸಿರುವುದಿಲ್ಲ. ಆದರೆ, ವಾದಿ-1 ರವರು ವ್ಯಾಜ್ಯದ ಜಮೀನನ್ನು ನೋಂದಾಯಿತ ಹಕ್ಕುಬಿಡುಗಡೆ ಪತ್ರ ಸಂಖ್ಯೆ: 1717/2015-16 ದಿನಾಂಕ: 24.06.2015 ರ ಮೂಲಕ ಹಕ್ಕುಹೊಂದಿದ್ದು, ಅದರನ್ವಯ ವ್ಯಾಜ್ಯದ ಜಮೀನನ್ನು ನೋಂದಾಯಿತ ಕ್ರಯ ಪತ್ರ ಸಂಖ್ಯೆ: 797/2016-17 ದಿನಾಂಕ: 20.05.2016 ರನ್ವಯ ವಾದಿ-2 ರವರಿಗೆ ಕ್ರಯಕ್ಕೆ ನೀಡಿರುತ್ತಾರೆ. ಅದರಂತೆ, ಸದರಿ ವಾದಿ-2 ರವರು ಹಕ್ಕುಬದಲಾವಣೆಗೆ ಅರ್ಜಿ ಸಲ್ಲಿಸಲಾಗಿ, ಪ್ರತಿವಾದಿಯು ಆಕ್ಷೇಪಣೆ ಸಲ್ಲಿಸಿದ್ದು, ಸದರಿ ಆಕ್ಷೇಪಣೆಗೆ ಒತ್ತು ನೀಡುವ ಯಾವುದೇ ಪೂರಕ ದಾಖಲೆಗಳನ್ನು ಸಹ ಸಲ್ಲಿಸಿರುವುದಿಲ್ಲ.

ಕಾರಣ, ಪ್ರತಿವಾದಿಗೆ ಸದರಿ ಪ್ರಕರಣದಲ್ಲಿ ಆಸಕ್ತಿ ಇಲ್ಲವೆಂದು ಪರಿಗಣಿಸಿ, ಹೊಸಪೇಟೆ ತಾಲೂಕು, [illegible] ನೋಂದಾಯಿತ ಕ್ರಯ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇಲೆ ಸದರಿ ತಕರಾರನ್ನು ವಜಾಗೊಳಿಸುತ್ತಾ, ಹೊಸಪೇಟೆ ತಾಲೂಕು, ಮಲಪನಗುಡಿ ಗ್ರಾಮದ ಸ.ನಂ.82/3 ವಿಸ್ತೀರ್ಣ: 01 ಎಕರೆ 84 ಸೆಂಟ್ಸ್ ಜಮೀನನ್ನು ನೋಂದಾಯಿತ ಕ್ರಯ ಪತ್ರ ಸಂಖ್ಯೆ: 797/2016-17 ದಿನಾಂಕ: 20.05.2016 ರನ್ವಯ ಕ್ರಯಕ್ಕೆ ಪಡೆದಿರುವ ವಾದಿ-2 ರವರಾದ ಶ್ರೀ ಸಣ್ಣ ಮಾರೆಪ್ಪ ತಂದೆ ಎ.ಮಾರೆಪ್ಪ ಇವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ: 29.09.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

ಉಪತಹಶೀಲ್ದಾರರು,
ನಾಡಕಛೇರಿ ಕಮಲಾಪುರ,
ಹೊಸಪೇಟೆ ತಾಲೂಕು.

ಪ್ರತಿಯನ್ನು:-

1]ವಾದಿ-1 ರವರಾದ ಶ್ರೀ ವಡ್ಡರ ತಿಮ್ಮಪ್ಪ ತಂದೆ ಲೇಟ್ ಪರಸಪ್ಪ, ವಾಸ:8ನೇ ವಾರ್ಡ್, ಕೊಂಡನಾಯಕನಹಳ್ಳಿ ಗ್ರಾಮ, ಹೊಸಪೇಟೆ ತಾಲೂಕು, ಇವರಿಗೆ ಕಳುಹಿಸಲಾಗಿದೆ.

2]ವಾದಿ-2 ರವರಾದ ಶ್ರೀ ಸಣ್ಣ ಮಾರೆಪ್ಪ ತಂದೆ ಎ.ಮಾರೆಪ್ಪ, ವಾಸ: ಬುಡುಗ ಜಂಗಮರ ಕಾಲೋನಿ, 22ನೇ ವಾರ್ಡ್, ಅರವಿಂದನಗರ, ಹೊಸಪೇಟೆ, ತಾಲೂಕು ಹೊಸಪೇಟೆ ಇವರಿಗೆ.

3]ಪ್ರತಿವಾದಿಯಾದ ಶ್ರೀ ವಿ.ಹುಲುಗಪ್ಪ ತಂದೆ ವಿ.ಪರಸಪ್ಪ, ವಾಸ: 8ನೇ ವಾರ್ಡ್, ಕೊಂಡನಾಯಕನಹಳ್ಳಿ ಗ್ರಾಮ, ಹೊಸಪೇಟೆ ತಾಲೂಕು, ಇವರಿಗೆ ಕಳುಹಿಸಲಾಗಿದೆ.

4]ಭೂಮಿಕೇಂದ್ರ, ತಾಲೂಕು ಕಛೇರಿ, ಹೊಸಪೇಟೆ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

5]ಕಛೇರಿ ಕಡತಕ್ಕೆ.